ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಸಂತಾಪ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ ದಿನಾಂಕ : DATE : 08/03/2020

# ಮಾತಾ ಮಾಣಿಕೇಶ್ವರಿ ಶಿವೈಕ್ಯ

## ಲಕ್ಷಾಂತರ ಭಕ್ತರನ್ನು ಅಗಲಿದ ಮಹಾಯೋಗಿನಿ

**ಕಲಬುರಗಿ:** ಮಹಾಯೋಗಿನಿ, ರೂಪರಹಿತ, ವೀರ ಧರ್ಮಜ ಪೂಜ್ಯ ಮಾತಾ ಮಾಣಿಕೇಶ್ವರಿ (86) ಶನಿವಾರ ರಾತ್ರಿ ಶಿವೈಕ್ಯರಾದರು. ಯಾದಗಿರಿ ಜಿಲ್ಲಾಸ್ಪತ್ರೆ ವೈದ್ಯೆ ಡಾ.ನೀಲಮ್ಮ ಆರೋಗ್ಯ ಪರಿಶೀಲಿಸಿದ ಬಳಿಕ ಪ್ರಾಣತ್ಯಜಿಸಿದ ಬಗ್ಗೆ ಖಚಿತಪಡಿಸಿದ್ದಾರೆ. ಕೆಲವು ದಿನಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಮಾತಾಜಿ ಅಗಲಿಕೆ ಸುದ್ದಿ ತಿಳಿಯುತ್ತಿದ್ದಂತೆ ಕಲಬುರಗಿ, ಯಾದಗಿರಿ, ರಾಯಚೂರು, ಬೀದರ್ ಸೇರಿ ಆಂಧ್ರಪ್ರದೇಶ, ತೆಲಂಗಾಣದ ವಿವಿಧೆಡೆಯಿಂದ ಅಸಂಖ್ಯ ಭಕ್ತರು ಶ್ರೀಕ್ಷೇತ್ರದತ್ತ ಹೆಜ್ಜೆ ಹಾಕಿದ್ದಾರೆ. ಮಾಣಿಕೇಶ್ವರಿ ಅಮ್ಮನವರು ಪ್ರತಿವರ್ಷ ಮಹಾ ಶಿವರಾತ್ರಿ ಹಾಗೂ ಗುರುಪೂರ್ಣಿಮೆ ದಿನ ಹೀಗೆ ವರ್ಷಕ್ಕೆರಡು ಸಲ ಲಕ್ಷಾಂತರ ಭಕ್ತರಿಗೆ ದರ್ಶನ ಭಾಗ್ಯ ಕರುಣಿಸುತ್ತಿದ್ದರು.



**ಮಂಗಳವಾರ ಅಂತ್ಯಸಂಸ್ಕಾರ:** ಯಾನಾಗುಂದಿ ಬೆಟ್ಟದಲ್ಲಿರುವ ಆಶ್ರಮದಲ್ಲಿ ಭಾನುವಾರ ಬೆಳಗ್ಗೆ 10ರಿಂದ ಮಾತಾಜಿ ಪಾರ್ಥಿವ ಶರೀರದ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಶನಿವಾರ ರಾತ್ರಿಯಿಂದಲೇ ಅಖಂಡ ಭಜನೆ, ವಿಶೇಷ ಪೂಜೆ ಆರಂಭವಾಗಿದ್ದು, ಮಂಗಳವಾರ ಸಂಜೆ ವಿಧಿ ವಿಧಾನಗಳೊಂದಿಗೆ ಅಂತ್ಯಸಂಸ್ಕಾರ ನೆರವೇರಲಿದೆ.

ವಿವರ **ಪುಟ 8**

**ಯಾನಾಗುಂದಿಯತ್ತ ಭಕ್ತರ ದಂಡು | ಮಂಗಳವಾರ ಅಂತ್ಯಕ್ರಿಯೆ**

# ಪವಾಡಗಳ ಮಾತಾಜಿ ಮಾಣಿಕೇಶ್ವರಿ

**ಕಲಬುರಗಿ:** ಮಾತೆ ಮಾಣಿಕೇಶ್ವರಿ ಅಂದರೆ ಭಕ್ತರ ಪಾಲಿಗೆ ನಡೆದಾಡುವ ದೇವರಿದ್ದಂತೆ. ಬೇಡಿದವರ ಇಷ್ಟಾರ್ಥಗಳನ್ನು ಸಿದ್ಧಿಸುವಂತೆ ಆಶೀರ್ವಾದ ಮಾಡುತ್ತಿದ್ದರು. ನಂಬಿ ಬಂದ ಭಕ್ತರನ್ನು ರಕ್ಷಿಸಿ ಪೊರೆಯುತ್ತಿದ್ದ ಮಹಾನ್ ಚೇತನ ಸ್ವರೂಪಿಯಾಗಿದ್ದರು. ಹಲವಾರು ಪವಾಡಗಳನ್ನು ಮಾಡಿದ್ದ ಅವರು ಭಕ್ತರನ್ನು ಶಿವನ ದಾರಿಯಲ್ಲಿ ನಡೆಸಲು ಹೆಜ್ಜೆ ಇರಿಸುವ ಮೂಲಕ ಅಹಿಂಸೆಯ ರಾಯಭಾರಿಯಾಗಿದ್ದರು. ಅಂದಿದ್ದೆ ಆಗುತ್ತದೆ ಎಂದು ನಂಬಿಕೆಯಿದ್ದರಿಂದ ಅಮ್ಮನ ದರ್ಶನ ಆಶೀರ್ವಾದ ಪಡೆದುಕೊಳ್ಳಲು ನಾಡು ಆಳುತ್ತಿದ್ದ ರಾಜಕಾರಣಿಗಳು, ಅಧಿಕಾರಿಗಳು ಗಂಟೆಗಟ್ಟಲೆ ಕಾದು ಕುಳಿತುಕೊಳ್ಳುತ್ತಿದ್ದರು. ಮುಖ್ಯಮಂತ್ರಿಗಳಾಗಿದ್ದವರೇ ಐದಾರು ಗಂಟೆ ಕಾದಿದ್ದರು. ಹಾಲಿ ಗೃಹ ಸಚಿವ ಅಮಿತ್ ಷಾ ಅವರಿಗೆ ಈ ಹಿಂದೆ ದರ್ಶನ ಭಾಗ್ಯವೇ ಸಿಕ್ಕಿರಲಿಲ್ಲ.



ನಿರಾಹಾರಿ ಆಗಿದ್ದ ಮಾತಾಜಿ ಅವರಿಗೆ ಗಾಳಿಯೇ ಆಹಾರವಾಗಿತ್ತು. ಅಪರೂಪಕ್ಕೊಮ್ಮೆ ಹಣ್ಣು, ನೀರು ಸೇವಿಸುತ್ತಿದ್ದರು.

**ಮಾತೆ ಮಾಣಿಕೇಶ್ವರಿ ಅವರು ಶಿವೈಕ್ಯರಾಗಿರುವುದು ರಾಜ್ಯ ಹಾಗೂ ಲಕ್ಷಾಂತರ ಭಕ್ತ ಸಮೂಹಕ್ಕೆ ತುಂಬಲಾರದ ನಷ್ಟತಂದಿದೆ. ಆದರೆ ಅವರ ಜೀವನ ಹಾಗೂ ತತ್ತ್ವಾದರ್ಶಗಳು ಮುಂದಿನ ಪೀಳಿಗೆಗೂ ದಾರಿದೀಪ.**

ಡಾ. ವಿಜಯ ಸಂಕೇಶ್ವರ
**ಚೇರ್ಮನ್**

ಆನಂದ ಸಂಕೇಶ್ವರ
**ವ್ಯವಸ್ಥಾಪಕ ನಿರ್ದೇಶಕರು**

**ವಿಆರ್‌ಎಲ್ ಸಮೂಹ ಸಂಸ್ಥೆಗಳು**

## ಬಾಲ್ಯದಲ್ಲೇ ಅಧ್ಯಾತ್ಮದ ಆಸಕ್ತಿ

**ಸೇಡಂ** ತಾಲೂಕಿನ ಗಡಿ ಪ್ರದೇಶ ಮಲ್ಲಾಬಾದ್ ರೈತ ದಂಪತಿ ಆಶಮ್ಮ ಮತ್ತು ಬುಗ್ಗಪ್ಪನವರ ಮಗಳಾಗಿ 1934ರಲ್ಲಿ ಮಾತಾಜಿ ಜನಿಸಿದರು. ಚಿಕ್ಕಂದಿನಿಂದಲೇ ಗಿಡ ಮರಗಳನ್ನು ಹತ್ತಿ ಧ್ಯಾನಾಸಕ್ತರಾಗುತ್ತಿದ್ದರು. ಮಂದಿರಗಳಲ್ಲಿ ಕಲ್ಲುಗಳನ್ನು ಕೂಡಿ ಹಾಕಿ ದೇವರೆಂದು ಧ್ಯಾನಿಸುತ್ತಿದ್ದರು. 9ನೇ ವಯಸ್ಸಿನಲ್ಲಿ ಶಿಲಾರಕೋಟದ ಮಾಣಿಕಪ್ಪ ಜತೆ ಒತ್ತಾಯಪೂರ್ವಕ ಮದುವೆ ಮಾಡಲಾಯಿತು. 11ನೇ ವಯಸ್ಸಿನಲ್ಲಿ ಗಂಡನ ಮನೆಯವರು ಕರೆಯಲು ಬಂದರು. ತಾಯಿ ತಂದೆಯರ ಮಾತು ಮೀರಿ ಗಂಡನ ಮನೆಗೆ ಹೋಗುವುದಕ್ಕಿಂತ ಸಾಯುವುದೇ ಲೇಸು ಎಂದು ಅನ್ನ ನೀರು ಬಿಟ್ಟರು. ಶಿವನ ಪಾದ ಸೇರಲು ಹಂಬಲಿಸಿ ಅಡವಿ ಸೇರಿದರು. ಕಾಡುಗಳಲ್ಲಿ ಅಲೆಯುತ್ತ 14ನೇ ವಯಸ್ಸಿನಲ್ಲಿ ನಿರ್ಜನ ಪ್ರದೇಶವಾದ ಯಾನಾಗುಂದಿ ಬೆಟ್ಟದ ಮರಗಳಲ್ಲಿ ಧ್ಯಾನಾಸಕ್ತರಾಗಿ ಹಲವು ಹಗಲು, ರಾತ್ರಿಗಳನ್ನು ಕಳೆದು ಕಠೋರ ತಪಸ್ಸು ಮಾಡುವ ಮೂಲಕ ಮಹಾಯೋಗಿನಿ ಎನಿಸಿಕೊಂಡರು. ಶಿವ ಸ್ವರೂಪಿಣಿ ಮಾತಾ ಮಾಣಿಕೇಶ್ವರಿ ದರ್ಶನವೇ ಒಂದು ಭಾಗ್ಯ. ವರ್ಷದಲ್ಲಿ ಒಂದೆರಡು ಬಾರಿ ಮಾತ್ರ ದರ್ಶನ ಭಾಗ್ಯ ಕರುಣಿಸುತ್ತಿದ್ದರು. ಮಾತಾಜಿ ದರ್ಶನಕ್ಕೆ ಆಂಧ್ರ, ಕರ್ನಾಟಕದ ವಿವಿಧೆಡೆಯಿಂದ ಜನಸಾಗರ ಹರಿದು ಬರುತ್ತಿತ್ತು.